# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 632 (496) |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಅರವಿಂದ ಕುಮಾರ್ ಅರಳಿ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |
| ಉತ್ತರಿಸುವ ದಿನಾಂಕ | : | 20.02.2024 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕಳೆದ 05 ವರ್ಷಗಳಲ್ಲಿ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಕೈಗಾರಿಕೆಗಳನ್ನು ಸ್ಥಾಪಿಸಲು ಉದ್ದೇಶಿಸಲಾದ ಹಾಗೂ ಇಲ್ಲಿಯವರೆಗೂ ಮಂಜೂರಾದ ಕೈಗಾರಿಕೆ ಯೋಜನೆಗಳಾವುವು; | ರಾಜ್ಯ ಸರ್ಕಾರದ ವತಿಯಿಂದ ನೇರವಾಗಿ ಯಾವುದೇ ಕೈಗಾರಿಕೆಗಳನ್ನು ಸ್ಥಾಪಿಸುವುದಿಲ್ಲ. ಆದರೆ, ಕೈಗಾರಿಕೆಗಳನ್ನು ಸ್ಥಾಪಿಸುವ ಖಾಸಗಿ ಉದ್ದಿಮೆದಾರರಿಗೆ ಇಲಾಖೆಯಿಂದ ಅಗತ್ಯ ಬೆಂಬಲ ಸೇವೆ ಒದಗಿಸಲಾಗುತ್ತದೆ.<br><br>ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಇಲ್ಲಿಯವರೆಗೂ ಖಾಸಗಿ ಉದ್ದಿಮೆದಾರರ 350 ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ.<br><br>ಈ ಯೋಜನೆಗಳ ಪೈಕಿ 57 ಯೋಜನೆಗಳು ಕಾರ್ಯಾರಂಭ ಮಾಡಿದ್ದು ಒಟ್ಟು ರೂ. 52,180 ಕೋಟಿ ಹೂಡಿಕೆಯಾಗಿದೆ ಹಾಗೂ ಒಟ್ಟು 40,565 ಉದ್ಯೋಗ ಸೃಜನೆಯಾಗಿದೆ. |
| ಆ | ಈ ಯೋಜನೆಗಳಿಂದ ಎಷ್ಟು ಹುದ್ದೆಗಳು ಸೃಜನೆಯಾಗಿವೆಯೇ ಹಾಗಿದ್ದಲ್ಲಿ, ಹಾಗೂ ಇಲ್ಲಿಯವರೆಗೆ ಎಷ್ಟು ನಿರುದ್ಯೋಗಿಗಳಿಗೆ ಉದ್ಯೋಗ ನೀಡಲಾಗಿದೆ; (ವಿವರ ನೀಡುವುದು) | ವಿವರಗಳನ್ನು **ಅನುಬಂಧದಲ್ಲಿ** ಲಗತ್ತಿಸಿದೆ. |
| ಇ | ಅತ್ಯಂತ ಹಿಂದುಳಿದ ಭಾಗವಾಗಿರುವ ಕಲ್ಯಾಣ ಕರ್ನಾಟಕದಲ್ಲಿ ವಾಣಿಜ್ಯ ಮತ್ತು ಕೈಗಾರಿಕೋದ್ಯಮಗಳ ಕೊರತೆ ಇದ್ದು, ಈ ಭಾಗದಲ್ಲಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಸರ್ಕಾರ ಯೋಜನೆಗಳನ್ನು ರೂಪಿಸಿದೆಯೇ; ರೂಪಿಸಿದ್ದಲ್ಲಿ ಸಂಪೂರ್ಣ ವಿವರ ನೀಡುವುದು; | ಕೈಗಾರಿಕೆಗಳ ಅಭಿವೃದ್ಧಿಗಾಗಿ ಕೈಗಾರಿಕಾ ನೀತಿ 2020-25 ನ್ನು ಜಾರಿಗೆ ತರಲಾಗಿದೆ. ಅದರಂತೆ ಕಲ್ಯಾಣ ಕರ್ನಾಟಕ ಭಾಗದ ಕಲಬುರಗಿ, ಬೀದರ್, ಯಾದಗಿರಿ, ಕೊಪ್ಪಳ, ರಾಯಚೂರು & ಬಳ್ಳಾರಿ 6 ಜಿಲ್ಲೆಗಳನ್ನು ವಲಯ-1 ರಡಿ ಪರಿಗಣಿಸಿದ್ದು, ಈ ಜಿಲ್ಲೆಯಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಹೆಚ್ಚಿನ ರಿಯಾಯಿತಿ ಮತ್ತು ಪ್ರೋತ್ಸಾಹಗಳ ಉತ್ತೇಜನ ನೀಡಲಾಗುತ್ತಿದೆ.<br><br>ಕೈಗಾರಿಕೆಗಳ ಅಭಿವೃದ್ಧಿಗೆ ಸರ್ಕಾರ ಕೈಗಾರಿಕಾ ನೀತಿಯಂತೆ ಈ ಕೆಳಕಂಡ ರಿಯಾಯಿತಿ ಮತ್ತು ಪ್ರೋತ್ಸಾಹಗಳನ್ನು ನೀಡಲಾಗುತ್ತಿದೆ.<br><br>1. ಮುದ್ರಾಂಕ ಶುಲ್ಕ ವಿನಾಯಿತಿ ಹಾಗೂ ನೋಂದಣಿ ಶುಲ್ಕ ರಿಯಾಯಿತಿ<br>2. ವಹಿವಾಟು ಆಧರಿಸಿ ಹೂಡಿಕೆ ಉತ್ತೇಜನ ಸಹಾಯಧನ<br>3. ಭೂ ಪರಿವರ್ತನಾ ಶುಲ್ಕ ಮರುಪಾವತಿ.<br>4. ವಿದ್ಯುತ್ ಶುಲ್ಕದ ಮೇಲಿನ ತೆರಿಗೆ ವಿನಾಯಿತಿ<br>5. ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ವಿದ್ಯುತ್ ಸಹಾಯಧನ<br>6. ತ್ಯಾಜ್ಯ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಸಹಾಯಧನ<br>7. ಖಾಸಗಿ ಹೂಡಿಕೆದಾರರಿಂದ ಸಾಮಾನ್ಯ ತ್ಯಾಜ್ಯ ಸಂಸ್ಕರಣಾ ಘಟಕ (CETP)/ ಕೈಗಾರಿಕೆಗಳ ಅಪಾಯಕಾರಿ ತ್ಯಾಜ್ಯ ವಿಲೇವಾರಿ ಯೋಜನೆಗಳಿಗೆ ಸಹಾಯಧನ<br>8. ಆ್ಯಂಕರ್ ಘಟಕ ಸಹಾಯಧನ ಇತ್ಯಾದಿ |

| | | |
|---|---|---|
| | | ಯಾದಗಿರಿ ಜಿಲ್ಲೆ ಕಡೆಚೂರು ಕೈಗಾರಿಕಾ ಪ್ರದೇಶದಲ್ಲಿ ಫಾರ್ಮಾ ಪಾರ್ಕ್ ಸ್ಥಾಪಿಸಲು ಭೂಮಿ ಮೀಸಲಿಟ್ಟು ಬಹಳಷ್ಟು ಕೈಗಾರಿಕೆಗಳಿಗೆ ಅನುಮೋದನೆ ನೀಡಲಾಗಿದೆ.<br><br>ಕೊಪ್ಪಳ ಜಿಲ್ಲೆಯಲ್ಲಿ ಗೊಂಬೆ ತಯಾರಿಕೆ, ಬಳ್ಳಾರಿ ಜಿಲ್ಲೆಯಲ್ಲಿ ಜವಳಿ ಉತ್ಪನ್ನಗಳು ಹಾಗೂ ಬೀದರ್ ಜಿಲ್ಲೆಯಲ್ಲಿ ಕೃಷಿ ಉಪಕರಣಗಳ ತಯಾರಿಕಾ ಕೈಗಾರಿಕಾ ಕ್ಲಸ್ಟರ್‌ಗಳ ಅಭಿವೃದ್ಧಿಗೆ ಅನುಮೋದನೆ ನೀಡಲಾಗಿದೆ. ಈ ಕ್ಲಸ್ಟರ್ ಗಳಲ್ಲಿ ಅನುಷ್ಠಾನಗೊಳ್ಳುವ ಕೈಗಾರಿಕೆಗಳಿಗೆ ವಿಶೇಷ ಪ್ರೋತ್ಸಾಹಧನ ಪ್ಯಾಕೇಜ್ ಗಳನ್ನು ನೀಡಿ ಉತ್ತೇಜಿಸಲಾಗುತ್ತದೆ. |
| ಈ | ಕಲ್ಯಾಣ ಕರ್ನಾಟಕದಲ್ಲಿ ಕೈಗಾರಿಕೆಗಳ ವಿಕೇಂದ್ರಿಕರಣಕ್ಕಾಗಿ ಉದ್ಯಮಿಗಳನ್ನು ಆಹ್ವಾನಿಸಲು ಪ್ರತ್ಯೇಕ ಕೈಗಾರಿಕೆ ನೀತಿಯನ್ನು ರೂಪಿಸುವ ಬಗ್ಗೆ ಸರ್ಕಾರದ ನಿಲುವೇನು? | ಕೈಗಾರಿಕೆಗಳ ಸಮತೋಲಿತ ಮತ್ತು ಸುಸ್ಥಿರ ಅಭಿವೃದ್ಧಿಗಾಗಿ ಕೈಗಾರಿಕಾ ನೀತಿ 2020-25 ನ್ನು ಜಾರಿಗೆ ತರಲಾಗಿದೆ. ಅದರಂತೆ ಕಲ್ಯಾಣ ಕರ್ನಾಟಕ ಭಾಗದ ಕಲಬುರಗಿ, ಬೀದರ್, ಯಾದಗಿರಿ, ಕೊಪ್ಪಳ, ರಾಯಚೂರು & ಬಳ್ಳಾರಿ 6 ಜಿಲ್ಲೆಗಳನ್ನು ವಲಯ-1 ರಡಿ ಪರಿಗಣಿಸಿದ್ದು, ಈ ಜಿಲ್ಲೆಗಳಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಹೆಚ್ಚಿನ ರಿಯಾಯಿತಿ ಮತ್ತು ಪ್ರೋತ್ಸಾಹಗಳ ಉತ್ತೇಜನ ನೀಡಲಾಗುತ್ತಿದೆ. |

ಸಿಐ 68 ಎಸ್‌ಪಿಐ 2024

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು

LCQ- 632(496) ಅನುಬಂಧ

# Kalyana Karnataka District wise approved projects list

| | Name of District | Implemented | | | Under Implementation | | | Dropped | | | No Action | | | Total Projects | | |
|---|---|---|---|---|---|---|---|---|---|---|---|---|---|---|---|---|
| | | No. of Projects | Investment Cr | No. of Employment | No. of Projects | Investment Cr | No. of Employment | No. of Projects | Investment Cr | No. of Employment | No. of Projects | Investment Cr | No. of Employment | No. of Projects | Investment Cr | No. of Employment |
| 1 | Ballari | 31 | 30096.45 | 8796 | 53 | 128400.95 | 27997 | 7 | 188.44 | 2405 | 5 | 3913.04 | 919 | 96 | 162598.88 | 40117 |
| 2 | Bidar | 3 | 50.41 | 112 | 7 | 362.81 | 692 | 2 | 518.97 | 635 | 0 | 0 | 0 | 12 | 932.19 | 1439 |
| 3 | Gulbarga | 5 | 1204.62 | 1026 | 15 | 7848.77 | 2533 | 1 | 208.33 | 195 | 0 | 0 | 0 | 21 | 9261.72 | 3754 |
| 4 | Koppal | 15 | 20517.78 | 29428 | 20 | 6474.23 | 8838 | 1 | 25.44 | 45 | 1 | 91 | 38 | 37 | 27108.45 | 38349 |
| 5 | Raichuru | 0 | 0 | 0 | 34 | 1826.61 | 1869 | 4 | 80.46 | 145 | 1 | 12.9 | 10 | 39 | 1919.97 | 2024 |
| 6 | Yadagiri | 3 | 311.41 | 1203 | 121 | 4851.15 | 19992 | 16 | 793.99 | 7927 | 5 | 400.48 | 1613 | 145 | 6357.03 | 30735 |
| | **Grand Total** | **57** | **52180.67** | **40565** | **250** | **149764.52** | **61921** | **31** | **1815.63** | **11352** | **12** | **4417.42** | **2580** | **350** | **208178.24** | **116418** |